**ದಿನಾಂಕಃ 23.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎಸ್ ಎಂ., ಪ್ರತಿವಾದಿ ಪರ ವಕೀಲರಿಂದ**

**3.** ದಾವಾ ಆಸ್ತಿಗಳೆಲ್ಲವೂ ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಅವುಗಳ ಸರ್ವೇ ನಂಬರ್ ಹೇಳಲು ಬರುವುದಿಲ್ಲ. ಅವುಗಳ ಪೈಕಿ 12–15 ಐಟಂ ಗಳು ಪಿತ್ರಾರ್ಜಿತ ಜಮೀನುಗಳಾಗಿದ್ದು, ಉಳಿದವು ನಾವೇ ಸಂಪಾದನೆ ಮಾಡಿರುತ್ತೇವೆ. ಪಿತ್ರಾರ್ಜಿತ ಆಸ್ತಿಗಳು ನನ್ನ ದೊಡ್ಡಪ್ಪ ಸುಬ್ಬಣ್ಣ ಮತ್ತು ಆತನ ಮಗನಾದ ರೆಡ್ಡಪ್ಪನ ಹೆಸರುಗಳಲ್ಲಿ ನಮೂದು ಇರುತ್ತವೆ. ಈ ಮೇಲಿನ ವಿಚಾರವನ್ನು ವಾದಪತ್ರದಲ್ಲಿ ಹೇಳಿರುತ್ತೇನೆ.

**4.** ಕೊಂಡಕ್ಕ ನನಗೆ ಮುತ್ತಜ್ಜಿಯಾಗಬೇಕು. ಕೊಂಡಕ್ಕನಿಗೆ ಬಂದಿರುವಂತಹ ಆಸ್ತಿಗಳು ಕೂಡ ನಮಗೆ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ಅವುಗಳ ಸರ್ವೇ ನಂಬರ್ ಹೇಳಲು ಬರುವುದಿಲ್ಲ. ಕೊಂಡಕ್ಕ ನಾನು ಹುಟ್ಟುವುದಕ್ಕಿಂತ ಮುಂಚೆಯೇ ತೀರಿಕೊಂಡಿದ್ದರು. ಕೊಂಡಕ್ಕ ತೀರಿಕೊಂಡ ನಂತರ ಅವರ ಹೆಸರಿನಲ್ಲಿರುವ ಆಸ್ತಿಗಳು ಮಕ್ಕಳಾದ ಸುಬ್ಬಣ್ಣ ಹಾಗೂ ಅಕ್ಕಲಪ್ಪನಿಗೆ ಬಂದಿರುತ್ತವೆ. ಅಕ್ಕಲಪ್ಪ ನನ್ನ ತಂದೆ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳನ್ನು ಸುಬ್ಬಣ್ಣ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಕೊಂಡಕ್ಕನಿಂದ ಆತನ ಮಕ್ಕಳಾದ ಸುಬ್ಬಣ್ಣ ಮತ್ತು ನನ್ನ ತಂದೆ ಅಕ್ಕಲಪ್ಪನ ಹೆಸರುಗಳು ಬಂದಂತಹ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ. ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಆದ್ದರಿಂದ ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

**5.** ದಾವಾ ಆಸ್ತಿ ಸಂಖ್ಯೆ 46 ರಿಂದ 53 ರ ಆಸ್ತಿಗಳು ಕೂಡ ಒಟ್ಟು ಕುಟುಂಬದ ಆಸ್ತಿಗಳು ಎಂದು ತಿಳಿದುಕೊಂಡು ಅವುಗಳನ್ನು ತದನಂತರದಲ್ಲಿ ಸೇರ್ಪಡೆ ಮಾಡಿರುತ್ತೇನೆ. ಈ ಬಗ್ಗೆ ವಾದಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳು ನನ್ನ ತಾಯಿಯಾದ ಪಾರ್ವತಮ್ಮನಿಗೆ ಅವರ ತಂದೆಯಾದ ಮುನಿಶಾಮಿಯಿಂದ ಬಂದಿರುತ್ತವೆ. ಸದರಿ ಮುನಿಶಾಮಿಯ ದಾವಾ ಆಸ್ತಿ ಸಂಖ್ಯೆ 46 ರಿಂದ 53 ಬಂದಿರುತ್ತವೆ ಎಂದು ತೋರಿಸಲು ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ಬೇಕಾದರೆ ಹಾಜರು ಪಡಿಸಿರುತ್ತೇನೆಂದು ನುಡಿಯುತ್ತಾರೆ.

**6.** ದಾವಾ ಬಿ ಶೆಡ್ಯೂಲ್ ಆಸ್ತಿಗಳು ರೆಡ್ಡಪ್ಪನ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಸಾಕ್ಷಿಯೂ ಅವರು ಒಟ್ಟು ಕುಟುಂಬದ ಯಜಮಾನರಾಗಿದ್ದ ಕಾರಣ ಅವರ ಹೆಸರಿನಲ್ಲಿ ನಮೂದಿಸಿ ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ರೆಡ್ಡಪ್ಪನವರು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಹಾಗೂ ಅವರು ಯಜಮಾನಿಕೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**7.** ನಾನು ದಿ. 13.06.1984 ರಂದು ಜನಿಸಿರುತ್ತೇನೆ. ದಾವಾ ಬಿ ಶೆಡ್ಯೂಲ್ ಪೈಕಿ 1 ನೇ ದಾವಾ ಆಸ್ತಿಯಲ್ಲಿ ನನ್ನ ದೊಡ್ಡಪ್ಪನ ಮಗ ರೆಡ್ಡಪ್ಪ ದಿ. 18.04.1987 ರಂದು ಖರೀದಿಸಿರುತ್ತಾನೆ ಎಂದರೆ ಸರಿ. ಸಾಕ್ಷಿಯೂ ನನ್ನ ದೊಡ್ಡಪ್ಪ ಹಾಗೂ ನನ್ನ ತಂದೆ ಅನಕ್ಷಸ್ಥರು ಆದ್ದರಿಂದ ನನ್ನ ದೊಡ್ಡಪ್ಪನ ಮಗ ರೆಡ್ಡಪ್ಪನ ಹೆಸರಿಗೆ ಕ್ರಯ ಮಾಡಿಸಿದರು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ವಾದಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ಮನೆಯಲ್ಲಿ ಎ.ವಿ. ಮುನಿಸ್ವಾಮಿ ಗೌಡ ರವರೇ ಬಾಡಿಗೆಗೆ ಇರುವ ವಿಚಾರ ಗೊತ್ತಿರುವುದಿಲ್ಲ. ನಮ್ಮ ಒಟ್ಟು ಕುಟುಂಬದ ಸದಸ್ಯರು ಕೂಡ ಈ ವಿಚಾರವನ್ನು ನನಗೆ ತಿಳಿಸಿರುವುದಿಲ್ಲ. ಮುನಿಸ್ವಾಮಿ ಗೌಡ ರವರು ಮನೆಯನ್ನು ಖಾಲಿ ಮಾಡದೇ ಇದ್ದ ಕಾರಣಕ್ಕೆ ಈ ಬಗ್ಗೆ ನ್ಯಾಯಾಲಯದಲ್ಲಿ ವ್ಯಾಜ್ಯ ಉಂಟಾಗಿತ್ತು ಎಂದರೆ ಸಾಕ್ಷಿಯೂ ಹಿರಿಯರು ವ್ಯಾಜ್ಯ ಇದ್ದ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ತಂದೆ ತಾಯಿ ತಿಳಿಸಿರುತ್ತಾರೆ. ದಾವೆಯನ್ನು ದಾಖಲಿಸುವಾಗ ಮೇಲಿನ ವಿಚಾರಗಳು ನನ್ನ ಗಮನದಲ್ಲಿತ್ತು ಎಂದರೆ ಸರಿ. ಸದರಿ ವಿಚಾರವನ್ನು ನನ್ನ ವಕೀಲರಿಗೆ ದಾವೆಯನ್ನು ದಾಖಲಿಸುವಾಗ ತಿಳಿಸಿರುವುದಿಲ್ಲ.

( ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.